# ತುಮಕೂರು ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಾಲಯ, ಬಿ.ಹೆಚ್ ರಸ್ತೆ, ತುಮಕೂರು – 572 103, ದೂರವಾಣಿ ಸಂಖ್ಯೆ : 0816-2254546, 2255650, ಫ್ಯಾಕ್ಸ್: 0816-2270719


ಸಂಖ್ಯೆ:ತುವಿ:ಕಾ.ಅ.ಪ:2021-22/530

ದಿನಾಂಕ: 15.06.2021

## ಸಂಯೋಜನಾ ಪ್ರಕಟಣೆ

**ವಿಷಯ: ತುಮಕೂರು ವಿಶ್ವವಿದ್ಯಾನಿಲಯದ 2021-22ನೇ ಶೈಕ್ಷಣಿಕ ಸಾಲಿನ ಸಂಯೋಜನೆಗೆ ಆನ್-ಲೈನ್ ಮುಖಾಂತರ ಅರ್ಜಿಗಳನ್ನು ಆಹ್ವಾನಿಸಿರುವ ಕುರಿತು.**

* * * * *

2021-22ನೇ ಶೈಕ್ಷಣಿಕ ಸಾಲಿನ ಆನ್-ಲೈನ್ ಸಂಯೋಜನೆ ಕುರಿತಾಗಿ ಕೆಳಕಂಡ ಸರ್ಕಾರದ ಆದೇಶಗಳನ್ನು ಗಮನಕ್ಕೆ ತರಲಾಗಿದೆ.

1) ಸರ್ಕಾರದ ಆದೇಶ ಸಂಖ್ಯೆ ಇಡಿ 34 egov 2020 ದಿನಾಂಕ 22.06.2020
2) ಸರ್ಕಾರದ ಸುತ್ತೋಲೆ ಸಂಖ್ಯೆ ಇಡಿ 218 ಯುಎನ್ಇ 2020 ದಿನಾಂಕ 24.08.2020
3) ಸರ್ಕಾರದ ಆದೇಶ ಸಂಖ್ಯೆ ಇಡಿ 29 ಯುಎನ್ಇ 2021 ದಿನಾಂಕ 12.02.2021 ಮತ್ತು 16.02.2021

ಸರ್ಕಾರದ ಆದೇಶ ಸಂಖ್ಯೆ ಇಡಿ 34 egov 2020 ದಿನಾಂಕ 22.06.2020 ರಲ್ಲಿ ಸಂಯೋಜನೆ ಪ್ರಕ್ರಿಯೆಯನ್ನು ಆನ್-ಲೈನ್ ಮುಖಾಂತರ ಕೈಗೊಳ್ಳಲು ಆದೇಶಿಸಿರುವ ಹಿನ್ನೆಲೆಯಲ್ಲಿ. ತುಮಕೂರು ವಿಶ್ವವಿದ್ಯಾನಿಲಯದ 2021-22ನೇ ಶೈಕ್ಷಣಿಕ ಸಾಲಿಗೆ ಕಾಲೇಜುಗಳ ಸ್ನಾತಕ / ಸ್ನಾತಕೋತ್ತರ ಕೋರ್ಸುಗಳ ಸಂಯೋಜನೆ ನವೀಕರಣ, ಹೊಸ ಕೋರ್ಸು, ವಿಷಯ, ಭಾಷೆಗಳು, ವಿದ್ಯಾರ್ಥಿ ಪ್ರವೇಶ ಪ್ರಮಾಣದ ಹೆಚ್ಚಳ, ಕಾಲೇಜುಗಳ ಹೆಸರು ಬದಲಾವಣೆ, ಕಾಲೇಜಿನ ಸ್ಥಳ ಬದಲಾವಣೆ, ಆಡಳಿತ ಮಂಡಳಿ ಬದಲಾವಣೆ, ಶಾಶ್ವತ ಸಂಯೋಜನೆ, ಶಾಶ್ವತ ಸಂಯೋಜನೆ ನವೀಕರಣ, ಕಾಲೇಜುಗಳ ಸ್ವಯಂ ಮುಚ್ಚುವಿಕೆ ಹಾಗೂ ನೊಂದಾಯಿಸಲ್ಪಟ್ಟ ಶೈಕ್ಷಣಿಕ ಸಂಘ-ಸಂಸ್ಥೆಗಳು ಹೊಸ ಕಾಲೇಜನ್ನು ಪ್ರಾರಂಭಿಸಲು ಸಂಯೋಜನೆಗಾಗಿ ಅರ್ಜಿಗಳನ್ನು ಆನ್-ಲೈನ್ ಮುಖಾಂತರ www.onlineaffiliation.karnataka.gov.in/Affiliation2122/login.aspx ಆಹ್ವಾನಿಸಲಾಗಿದೆ. ಈಗಾಗಲೇ ಸಂಯೋಜನೆ ಹೊಂದಿರುವ ಕಾಲೇಜುಗಳು 2020-21ನೆ ಸಾಲಿನ ಸಂಯೋಜನೆಗೆ ನೀಡಲಾಗಿದ್ದ Login ID & Password ಬಳಸಿಕೊಂಡು ಅರ್ಜಿಯನ್ನು ಸಲ್ಲಿಸುವುದು.

ಈ ಸಂಬಂಧ, 2021-22ನೇ ಶೈಕ್ಷಣಿಕ ಸಾಲಿನ ಸಂಯೋಜನೆಗೆ ಆನ್-ಲೈನ್ ಮುಖಾಂತರ ಭರ್ತಿ ಮಾಡಿರುವ ಅರ್ಜಿಗಳನ್ನು 4 ಪ್ರತಿಗಳಲ್ಲಿ ಕುಲಸಚಿವರು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು-572 103 ಇವರ ಕಚೇರಿಗೆ ಸಲ್ಲಿಸುವುದು.

### ಸಂಯೋಜನೆಗೆ ಸಂಬಂಧಿಸಿದ ಇತರೆ ಮಾಹಿತಿಗಳು:

1) **ಕಾಲೇಜಿನ ಪ್ರಾಂಶುಪಾಲರ ಹಾಗೂ ಸ್ನಾತಕೋತ್ತರ ಕೋರ್ಸುಗಳ ಅಧ್ಯಾಪಕರುಗಳ ನೇಮಕಾತಿಯಲ್ಲಿ ವಿಶ್ವವಿದ್ಯಾನಿಲಯದ ಧನ ಸಹಾಯ ಆಯೋಗದ (ಯು.ಜಿ.ಸಿ.) ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಿದಲ್ಲಿ ಮಾತ್ರ 2021-22ನೇ ಶೈಕ್ಷಣಿಕ ಸಾಲಿನ ಸಂಯೋಜನೆಯ ಪ್ರಸ್ತಾವನೆಯನ್ನು ಪರಿಗಣಿಸಲಾಗುವುದು.**
2) ಬಿ.ಇಡಿ/ಬಿ.ಪಿ.ಇಡಿ ಕಾಲೇಜು ಪ್ರಾರಂಭಿಸಲು ಇಚ್ಛಿಸುವ ನೋಂದಾಯಿತ ಸಂಸ್ಥೆಗಳು ಸಂಯೋಜನಾ ಅರ್ಜಿ ಸಲ್ಲಿಸುವ ಮೊದಲು ರಾಷ್ಟ್ರೀಯ ಶಿಕ್ಷಕರ ಶಿಕ್ಷಣ ಪರಿಷತ್(ಎನ್.ಸಿ.ಟಿ.ಇ) ಅಥವಾ ಸಂಬಂಧಿಸಿದ ಇತರ ಸಕ್ಷಮ ಪ್ರಾಧಿಕಾರಗಳ ಪೂರ್ವಾನುಮೋದನೆಯನ್ನು ಕಡ್ಡಾಯವಾಗಿ ಪಡೆದಿರಬೇಕು.
3) ಐದು ವರ್ಷಗಳ ನಿರಂತರ ತಾತ್ಕಾಲಿಕ ಸಂಯೋಜನೆಯನ್ನು ಪಡೆದ ಕಾಲೇಜುಗಳು ತಮ್ಮ ಅಸ್ತಿತ್ವದಲ್ಲಿರುವ ಕೋರ್ಸು/ವಿಷಯಗಳಿಗೆ ಹಿಂದಿನ ಸ್ಥಳೀಯ ತಪಾಸಣಾ ಸಮಿತಿಗಳು ವಿಧಿಸಿರುವ ಷರತ್ತುಗಳನ್ನು ಸಂಪೂರ್ಣವಾಗಿ ಪಾಲಿಸಿ, ವಿಶ್ವವಿದ್ಯಾಲಯ ಮತ್ತು ಯು.ಜಿ.ಸಿ. ಯಿಂದ ಕಾಲ ಕಾಲಕ್ಕೆ ನಿಗದಿಪಡಿಸುವ ಶೈಕ್ಷಣಿಕ ಗುಣಮಟ್ಟ ಹೊಂದಿರುವ ಹಾಗೂ NAAC ಸಂಸ್ಥೆಯಿಂದ ಮಾನ್ಯತೆ ಹೊಂದಿರುವ ಕಾಲೇಜುಗಳು ಶಾಶ್ವತ ಸಂಯೋಜನೆ / ಶಾಶ್ವತ ಸಂಯೋಜನೆ ನವೀಕರಣ ಮಂಜೂರಾತಿ ಕೋರಿ ಅರ್ಜಿ ಸಲ್ಲಿಸಬಹುದು.

(ಪು.ತಿ.ನೋ)

4) ಕನಿಷ್ಠ 5 ವರ್ಷಗಳ ಸಂಯೋಜನೆಯನ್ನು ಪೂರೈಸಿರುವ ಕಾಲೇಜುಗಳು ಸ್ನಾತಕೋತ್ತರ ಪದವಿ ಕೋರ್ಸ್‌ಗಳನ್ನು ಪ್ರಾರಂಭಿಸಲು ಉದ್ದೇಶಿಸಿದ್ದಲ್ಲಿ ಅಂತಹ ಸ್ನಾತಕೋತ್ತರ ಪದವಿ ಕೋರ್ಸಿಗೆ ಸಂಬಂಧಿಸಿದ ವಿಷಯದಲ್ಲಿ ಯು.ಜಿ.ಸಿ. ನಿಯಮಾನುಸಾರ 04 ಜನ ಅಧ್ಯಾಪಕರು ಅವರಲ್ಲಿ ಕನಿಷ್ಠ ಇಬ್ಬರು ಪಿಹೆಚ್.ಡಿ. ಪದವಿ ಹೊಂದಿದವರಾಗಿರಬೇಕು.

5) ಸಂಯೋಜಿತ ಕಾಲೇಜುಗಳು ನ್ಯಾಕ್ ಮಾನ್ಯತೆ ಪಡೆಯಲು ಅಗತ್ಯ ಕ್ರಮ ಕೈಗೊಳ್ಳುವುದು ಹಾಗೂ ನ್ಯಾಕ್ ಮಾನ್ಯತೆಯ ಅವಧಿ ಮುಕ್ತಾಯವಾಗಿರುವಂತಹ ಕಾಲೇಜುಗಳು ಮರು ಮಾನ್ಯತೆಗೆ ಅಗತ್ಯ ಕ್ರಮ ಕೈಗೊಂಡು ಮಾಹಿತಿಯನ್ನು ಅರ್ಜಿಯೊಂದಿಗೆ ಸಲ್ಲಿಸುವುದು.

6) ಹೊಸ ಕಾಲೇಜು ಪ್ರಾರಂಭಿಸಲು ಇಚ್ಛಿಸುವ ನೋಂದಾಯಿತ ಸಂಘ ಸಂಸ್ಥೆಗಳು ನವೀನ ಸಂಯೋಜನೆ ಮಂಜೂರಾತಿಗಾಗಿ ಅರ್ಜಿ ಸಲ್ಲಿಸಿ ಅರ್ಜಿಯೊಡನೆ ಈ ಕೆಳಕಂಡ ದಾಖಲಾತಿಗಳನ್ನು ತಪ್ಪದೆ ಲಗತ್ತಿಸತಕ್ಕದ್ದು.

(i) ಹೊಸ ಕಾಲೇಜು ಪ್ರಾರಂಭ ಮಾಡಲು ಇಚ್ಛಿಸುವವರು ಸರ್ಕಾರದ ಸುತ್ತೋಲೆ ಸಂಖ್ಯೆ ಇಡಿ 218 ಯುಎನ್ಇ 2020 ದಿನಾಂಕ 24.08.2020 ರ ಆದೇಶಾನುಸಾರ National Building Code-2016 ರ ನಿಯಮಾವಳಿಯನ್ವಯ ಕಾಲೇಜಿನ ಕಟ್ಟಡದ ಸುರಕ್ಷತೆ / ಸದೃಢತೆ ಕುರಿತು ಲೋಕೋಪಯೋಗಿ ಮತ್ತು ಅಗ್ನಿಶಾಮಕ ದಳ ಇಲಾಖೆಯಿಂದ ಪ್ರಮಾಣ ಪತ್ರಗಳನ್ನು ಕಡ್ಡಾಯವಾಗಿ ಪಡೆದು ಸಲ್ಲಿಸುವುದು. ಸದರಿ ಪ್ರಮಾಣ ಪತ್ರಗಳು ಇಲ್ಲದೆ ಸಲ್ಲಿಸುವ ಸಂಯೋಜನೆ ಅರ್ಜಿಯನ್ನು ಪರಿಗಣಿಸಲಾಗುವುದಿಲ್ಲ.

(ii) ಸಂಯೋಜನೆ ಪರಿನಿಯಮಾವಳಿಯನ್ವಯ ನಿಗದಿತ ಅರ್ಹತೆ / ಕೆಳಕಂಡಂತೆ ಜಮೀನಿನ ವಿಸ್ತೀರ್ಣತೆ / ನಿಗದಿತ ಠೇವಣಿ/ ಕಟ್ಟಡಗಳ ಸೌಲಭ್ಯ / ಸಂಸ್ಥೆಯ ಹಣಕಾಸಿನ ವಿವರಗಳ ಮಾಹಿತಿಯೊಂದಿಗೆ ಪ್ರಸ್ತಾವನೆ ಸಲ್ಲಿಸುವುದು ಹಾಗೂ ಇನ್ನಿತರೆ ಮಾನದಂಡಗಳನ್ನು ಹೊಂದಿರಬೇಕು.

| | |
|---|---|
| Corporation | 1.5 acre |
| Town / Taluk Panchayath | 2 acre |
| Other cities / areas | 5 acre |

(ಈ ಕುರಿತು ಸಂಯೋಜನಾ ಪರಿನಿಯಮಾವಳಿಯಲ್ಲಿನ ಮಾಹಿತಿಗೆ ಅನುಗುಣವಾಗಿ ಸಂಯೋಜನೆ ಅರ್ಜಿ ಸಲ್ಲಿಸುವುದು)

(iii) ಸಂಸ್ಥೆಯು ಹೊಂದಿರುವ ಜಮೀನಿನ ವಿಸ್ತೀರ್ಣವನ್ನು ಸ್ಪಷ್ಟವಾಗಿ ನಮೂದಿಸತಕ್ಕದ್ದು.

(iv) ಜಮೀನು ಆಯಾ ಸಂಸ್ಥೆಯ ಹೆಸರಿನಲ್ಲಿ ಇರತಕ್ಕದ್ದು ಮತ್ತು ಬಾಡಿಗೆ, ಕರಾರು ಅಥವಾ ಲೀಸ್ ಮೇಲೆ ಇರತಕ್ಕದ್ದಲ್ಲ.

(v) ವಿದ್ಯಾಸಂಸ್ಥೆಯ ನೋಂದಣಿ ಪತ್ರದ ದೃಢೀಕೃತ ಪ್ರತಿ.

(vi) ಮೆಮೊರಾಂಡಮ್ ಮತ್ತು ಆರ್ಟಿಕಲ್ಸ್ ಆಫ್ ಅಸೋಸಿಯೇಷನ್, ರೂಲ್ಸ್, ರೆಗ್ಯುಲೇಶನ್ಸ್ ಮತ್ತು ಬೈಲಾ ಪ್ರತಿ.

(vii) ಟ್ರಸ್ಟ್ ಆಗಿದ್ದರೆ, ಆ ಟ್ರಸ್ಟ್ ಡೀಡ್‌ನ ಒಂದು ಪ್ರತಿ ಹಾಗೂ ಸಂಬಂಧಪಟ್ಟ ಕಾಯಿದೆಯಡಿಯಲ್ಲಿ ನೋಂದಣಿಯಾಗಿರುವುದಕ್ಕೆ ದೃಢೀಕೃತ ಪ್ರತಿ ಮತ್ತು ಶೈಕ್ಷಣಿಕ ಉಪಯೋಗಕ್ಕೆ ಸಂಬಂಧಪಟ್ಟಂತೆ ಟ್ರಸ್ಟ್‌ನಲ್ಲಿ ತೆಗೆದುಕೊಂಡ ನಿರ್ಣಯದ ಪ್ರತಿ.

(viii) ಸೊಸೈಟಿ/ಟ್ರಸ್ಟ್‌ನ ಪ್ರಸಕ್ತ ಸಾಲಿನ ಲೆಕ್ಕಗಳ ಆಡಿಟ್ ವರದಿಯ ಪ್ರತಿ.

(ix) ಕಾಲೇಜಿನ ಲೆಕ್ಕ ಪತ್ರಗಳ ಆಡಿಟ್ ವರದಿ ಪ್ರತಿ.

(x) ಹಿಂದಿನ ವರ್ಷದ ವಾರ್ಷಿಕ ವರದಿಯ ಪ್ರತಿ.

(xi) ಉದ್ದೇಶಿತ ಕಾಲೇಜಿನ ಸ್ಥಾಪನೆಗೆ ನಿಗದಿಪಡಿಸಿರುವ ಸ್ಥಳ ಮತ್ತು ಅದರ ಸೂಕ್ತತೆ, ವಿವಾದ ಮುಕ್ತವಾಗಿರುವ ಬಗೆಗೆ ಮುಚ್ಚಳಿಕೆ ಪ್ರತಿ.

(ಪು.ತಿ.ನೋ)

(xii) ಪರಿಶಿಷ್ಟ ಜಾತಿ /ಪರಿಶಿಷ್ಟ ಪಂಗಡದ ಆಡಳಿತ ಮಂಡಳಿಯವರು ಪೂರಕವಾಗಿ ಸಂಬಂಧಿಸಿದ ಇಲಾಖೆಯಿಂದ ಪಡೆದಿರುವ ಪ್ರಮಾಣ ಪತ್ರಗಳನ್ನು ಅರ್ಜಿಯೊಂದಿಗೆ ಕಡ್ಡಾಯವಾಗಿ ಲಗತ್ತಿಸುವುದು.

(xiii) ಉದ್ದೇಶಿತ ಕಾಲೇಜು ರೂ. 100 ರ ಛಾಪ ಕಾಗದಲ್ಲಿ ವಿಶ್ವವಿದ್ಯಾಲಯ ಕಾಲಕಾಲಕ್ಕೆ ರಚಿಸುವ ಅಧಿನಿಯಮ (Act), ಪರಿನಿಯಮ/ಶಾಸನ (Statutes); ವಿನಿಯಮ (Regulations), ಆಧ್ಯಾದೇಶ (Ordinance), ನಿಯಮ (Rules) ಮತ್ತು ನಿರ್ದೇಶನಗಳಿಗೆ ಬದ್ಧರಾಗಿರುವುದಾಗಿ ತಿಳಿಸುವ ಮುಚ್ಚಳಿಕೆ ಪತ್ರ (Undertaking) ವನ್ನು ಅರ್ಜಿಯೊಂದಿಗೆ ಸಲ್ಲಿಸತಕ್ಕದ್ದು.

7) ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಆಡಳಿತ ಮಂಡಳಿಯವರು ನಡೆಸುವ ಕಾಲೇಜುಗಳು ನಿಗದಿತ ಸಂಯೋಜನಾ ಶುಲ್ಕದಲ್ಲಿ ಶೇ. 50 ರಷ್ಟು ಮಾತ್ರ ಪಾವತಿಸಬಹುದಾಗಿದೆ. ಇದಕ್ಕೆ ಪೂರಕವಾಗಿ ಸಂಬಂಧಿಸಿದ ಇಲಾಖೆಯಿಂದ ಪಡೆದಿರುವ ಪ್ರಮಾಣ ಪತ್ರವನ್ನು ಕಡ್ಡಾಯವಾಗಿ ಸಲ್ಲಿಸಬೇಕು. ಅಂತಹ ಪ್ರಮಾಣಪತ್ರ ಸಲ್ಲಿಸದಿದ್ದಲ್ಲಿ ಶೇ. 50 ರ ವಿನಾಯಿತಿಗೆ ಪರಿಗಣಿಸಲಾಗುವುದಿಲ್ಲ.

8) ನಿಗದಿತ ಅರ್ಜಿ ಶುಲ್ಕ ರೂ. 5,000/- (ರೂ. ಐದು ಸಾವಿರ ಮಾತ್ರ) ಗಳನ್ನು ಮತ್ತು ಸಂಬಂಧಪಟ್ಟ ಸಂಯೋಜನಾ ಶುಲ್ಕಗಳನ್ನು (RTGS/NEFT) ಮೂಲಕ ಹಣಕಾಸು ಅಧಿಕಾರಿಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು- ಇವರಿಗೆ ಸಂದಾಯವಾಗುವಂತೆ ಖಾತೆ ಸಂಖ್ಯೆ: **54040241380** ಗೆ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ವಿಶ್ವವಿದ್ಯಾನಿಲಯ ಶಾಖೆ, ತುಮಕೂರು (IFSC ಸಂಖ್ಯೆ SBIN 0040850) ಬ್ಯಾಂಕ್ ಖಾತೆಗೆ ಜಮಾ ಮಾಡಲು ಸೂಚಿಸಿದೆ.

9) ಸಂಯೋಜನೆಗೆ ಸಂಬಂಧಿಸಿದಂತೆ ಯು.ಜಿ.ಸಿ., ರಾಜ್ಯ ಸರ್ಕಾರ ಹಾಗೂ ವಿಶ್ವವಿದ್ಯಾನಿಲಯಗಳು ಕಾಲಕಾಲಕ್ಕೆ ಹೊರಡಿಸುವ ನೀತಿ ಸಂಹಿತೆಗಳನ್ನು/ನಿಯಮಾವಳಿಗಳನ್ನು ಕಡ್ಡಾಯವಾಗಿ ಪಾಲಿಸಬೇಕು.

10) ಸಂಯೋಜನೆ ಅರ್ಜಿಯನ್ನು ಈ ಕೆಳಕಂಡ ದಿನಾಂಕಗಳ ಒಳಗಾಗಿ ಸಲ್ಲಿಸುವುದು.

| | | | |
|---|---|---|---|
| (i) | ದಂಡ ಶುಲ್ಕವಿಲ್ಲದೆ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ | : | **30.06.2021** |
| (ii) | ರೂ. 10,000/- ದಂಡ ಶುಲ್ಕದೊಡನೆ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ | : | **05.07.2021** |
| (iii) | ರೂ. 20,000/- ದಂಡ ಶುಲ್ಕದೊಡನೆ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ | : | **10.07.2021** |

(iv) ದಿನಾಂಕ **10.07.2021**ರ ನಂತರ ಬರುವ ಅರ್ಜಿಗಳನ್ನು ವಿಶೇಷ ಸಂದರ್ಭವೆಂದು ಪರಿಗಣಿಸಿ ರೂ.50,000-00ಗಳ ದಂಡ ಶುಲ್ಕದೊಡನೆ ಸ್ಥಳೀಯ ವಿಚಾರಣಾ ಸಮಿತಿಯು ತನ್ನ ಕಾರ್ಯವನ್ನು ಆರಂಭಿಸುವವರೆಗೆ ಮಾನ್ಯ ಕುಲಪತಿಗಳ ಅನುಮೋದನೆ ಮೇರೆಗೆ ಪರಿಗಣಿಸಲಾಗುವುದು.

11) ಆನ್-ಲೈನ್ ಸಂಯೋಜನೆ, ಸಂಯೋಜನೆಗೆ ಸಂಬಂಧಿಸಿದ ಸರ್ಕಾರದ ಆದೇಶಗಳು, ಪತ್ರ ಹಾಗೂ ಸುತ್ತೋಲೆಗಳು, ಸಂಯೋಜನಾ ಶುಲ್ಕಗಳ ಮಾಹಿತಿ, ಸಂಯೋಜನೆಗೆ ಸಂಬಂಧಿಸಿದ ಸೂಚನೆ ಹಾಗೂ ಇತರೆ ಮಾಹಿತಿಗಳನ್ನು ವಿಶ್ವವಿದ್ಯಾಲಯದ ವೆಬ್‌ಸೈಟ್ www.tumkuruniversity.ac.in ಇಂದ ಪಡೆಯಬಹುದಾಗಿದೆ.

**ಸೂಚನೆ:**

1) ಸಂಯೋಜನೆ ಸಂಬಂಧ ಸರ್ಕಾರವು ಏಕರೂಪ ಪರಿನಿಯಮಾವಳಿಯನ್ನು ರಚಿಸಿ ಎಲ್ಲಾ ವಿಶ್ವವಿದ್ಯಾಲಯಗಳು ಅಳವಡಿಸಿಕೊಳ್ಳಲು ನಿರ್ದೇಶನ ನೀಡಲಾಗಿದೆ. ಅದರಂತೆ ಸಂಯೋಜನೆಗೆ ತುಮಕೂರು ವಿಶ್ವವಿದ್ಯಾನಿಲಯವು ಕ್ರಮವಹಿಸಲಾಗುತ್ತಿದೆ. ಸಂಯೋಜನೆಗೆ ಅರ್ಜಿ ಸಲ್ಲಿಸುವ ಕಾಲೇಜುಗಳು ಸದರಿ ಪರಿನಿಯಮಾವಳಿಯನ್ವಯ ಪ್ರಸ್ತಾವನೆ ಸಲ್ಲಿಸುವಂತೆ ತಿಳಿಸಲಾಗಿದೆ.

(ಪು.ತಿ.ನೋ)

2) ಸರ್ಕಾರದ ಆದೇಶ ಸಂಖ್ಯೆ ಇಡಿ 29 ಯುಎನ್ಇ 2021 ದಿನಾಂಕ 12.02.2021 ಮತ್ತು 16.02.2021 ರಲ್ಲಿ ವಿವಿಧ ಸಂಯೋಜನೆಗೆ ಸಂಬಂಧಿಸಿದಂತೆ ಸರ್ಕಾರವು ಶೇಕಡವಾರು ಅಂಕಗಳನ್ನು ನಿಗದಿಪಡಿಸಿದ್ದು, ಕಾಲೇಜುಗಳು ಸಂಯೋಜನಾ ಸಂಬಂಧ ಸ್ಥಳೀಯ ವಿಚಾರಣಾ ಸಮಿತಿಯು ಸಲ್ಲಿಸುವ ವರದಿಯಲ್ಲಿ ಕೋರಿರುವ ಸಂಯೋಜನೆಗೆ ಸಂಬಂಧಿಸಿದಂತೆ ಕೆಳಕಂಡಂತಿರುವ ಅಂಕಗಳನ್ನು ಪಡೆಯಬೇಕಿರುತ್ತದೆ.

| ಕ್ರಮ. ಸಂಖ್ಯೆ | ನಿಗದಿಪಡಿಸಬಹುದಾದ ಸಂಯೋಜನೆಯ ರೀತಿ | ಅವಶ್ಯವಿರುವ ಕನಿಷ್ಠ ಸಂಯೋಜನಾ ಶೇಕಡ ಅಂಕಗಳು (%) (ರಿಯಾಯಿತಿ ನಂತರ) |
|---|---|---|
| 1) | ಹೊಸ ಸಂಯೋಜನೆಗಳು | 35 |
| 2) | ಸಂಯೋಜನೆಗಳ ನವೀಕರಣ / ಮುಂದುವರಿಕೆ / ವಿಸ್ತರಣೆ | 40 |
| 3) | ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಳ | 45 |
| 4) | ಹೊಸ ಕೋರ್ಸ್‌ಗಳ / ಹೊಸ ಕಾಂಬಿನೇಷನ್‌ಗಳ ಮಂಜೂರಾತಿ | 50 |
| 5) | ಹೊಸ ಶಾಶ್ವತ ಸಂಯೋಜನೆಗಳು | 55 |
| 6) | ಶಾಶ್ವತ ಸಂಯೋಜನೆಗಳ ನವೀಕರಣ | 65 |

ಆದೇಶದ ಮೇರೆಗೆ

15/6

ಕುಲಸಚಿವರು

ಕುಲಸಚಿವರು
ತುಮಕೂರು ವಿಶ್ವವಿದ್ಯಾನಿಲಯ
ತುಮಕೂರು

ಗೆ

ಪ್ರಾಂಶುಪಾಲರು, ವಿಶ್ವವಿದ್ಯಾನಿಲಯದ ಎಲ್ಲಾ ಸಂಯೋಜಿತ ಕಾಲೇಜುಗಳು. ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು

ಪ್ರತಿಗಳು:

1. ಸರ್ಕಾರದ ಪ್ರಧಾನ ಮುಖ್ಯ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ, ಬಹುಮಹಡಿಗಳ ಕಟ್ಟಡ, ಡಾ. ಅಂಬೇಡ್ಕರ್ ವೀಧಿ, ಬೆಂಗಳೂರು-560 001
2. ಆಯುಕ್ತರು / ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಅರಮನೆ ರಸ್ತೆ, ಬೆಂಗಳೂರು.
3. ಕುಲಸಚಿವರು (ಪರೀಕ್ಷಾಂಗ), ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
4. ಹಣಕಾಸು ಅಧಿಕಾರಿಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
5. ಮಾನ್ಯ ಕುಲಪತಿಯವರ ಆಪ್ತಕಾರ್ಯದರ್ಶಿಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
6. ಉಪಕುಲಸಚಿವರು, ಶೈಕ್ಷಣಿಕ ವಿಭಾಗ, ಸಿಬ್ಬಂದಿ ವಿಭಾಗ, ಸಾಮಾನ್ಯ ಮತ್ತು ಅಭಿವೃದ್ಧಿ ವಿಭಾಗ, ಪರೀಕ್ಷಾಂಗ ವಿಭಾಗ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
7. ಸಿಸ್ಟಂ ಅನಾಲಿಸ್ಟ್, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು - ಸದರಿ ವಿಷಯಕ್ಕೆ ಸಂಬಂಧಿಸಿದ ಮಾಹಿತಿಯನ್ನು ವಿಶ್ವವಿದ್ಯಾನಿಲಯದ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ತಿಳಿಸಿದೆ.
8. ಕುಲಸಚಿವರು-ದಾವಣಗೆರೆ ವಿಶ್ವವಿದ್ಯಾಲಯ/ಬೆಂಗಳೂರು ವಿಶ್ವವಿದ್ಯಾಲಯ/ಮೈಸೂರು ವಿಶ್ವವಿದ್ಯಾಲಯ/ ಮಂಗಳೂರು ವಿಶ್ವವಿದ್ಯಾಲಯ/ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ/ಗುಲ್ಬರ್ಗಾ ವಿಶ್ವವಿದ್ಯಾಲಯ/ ಕೃಷ್ಣದೇವರಾಯ ವಿಶ್ವವಿದ್ಯಾಲಯ ಬಳ್ಳಾರಿ/ರಾಣಿ ಚೆನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ/ಹಂಪಿ ಕನ್ನಡ ವಿಶ್ವವಿದ್ಯಾಲಯ, ಹಂಪಿ.
9. ಕಚೇರಿ ಪ್ರತಿ.